# ಸಂಪಾದಕೀಯ

ಆತ್ಮೀಯ ಸಹೃದಯಿ ಓದುಗರೆಲ್ಲರಿಗೂ ನಮಸ್ಕಾರ,

ಅಲಯನ್ಸ್ ವಿಶ್ವವಿದ್ಯಾಲಯದ ಅನುಕರ್ಷ ತ್ರೈ ಮಾಸಿಕ ಪತ್ರಿಕೆಯು ಎಂದಿನಂತೆ ಸೃಜನಶೀಲ, ಸಂಶೋಧನಾ ಬರಹಗಳಿಗೆ ವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತ ಬರುತ್ತಿದೆ.

ತಂತ್ರಜ್ಞಾನದ ಮುನ್ನಡೆಯಿಂದ ಇಂದು ಸಂಶೋಧನಾ ಕ್ಷೇತ್ರವು ಹೊಸ ಹೊಸ ಆಯಾಮಗಳಿಗೆ ತೆರೆದುಕೊಳ್ಳುತ್ತಿದೆ.

"ಭಾರತೀಯ ಜ್ಞಾನ ಪರಂಪರೆ" ಎಂಬ ವಿಚಾರದಡಿಯಲ್ಲಿ ಅಮೂಲ್ಯವಾದ ಪ್ರಾಚೀನ ಜ್ಞಾನ ಭಂಡಾರದೊಂದಿಗಿನ ಅನುಸಂಧಾನದ ಅಗತ್ಯದ ಕುರಿತು ಇಂದು ಶೈಕ್ಷಣಿಕ ವಲಯದಲ್ಲಿ ವ್ಯಾಪಕ ಚರ್ಚೆ ನಡೆಯುತ್ತಿದೆ.

ಕನ್ನಡ ಭಾಷೆ ಹಾಗೂ ಸಾಹಿತ್ಯದ ದೃಷ್ಟಿಕೋನದಿಂದ ಗಮನಿಸಿದಾಗ ಭಾಷಾಶಾಸ್ತ್ರ, ಹಸ್ತಪ್ರತಿಶಾಸ್ತ್ರಗಳ ಹಿನ್ನೆಲೆಯಲ್ಲಿ ಶಾಸನಗಳು, ಹಸ್ತಪ್ರತಿಗಳಲ್ಲಿರುವ ಅಮೂಲ್ಯ ಜ್ಞಾನ ಭಂಡಾರದ ಜೊತೆ ಮುಖಾಮುಖಿಯಾಗುವ ಮೂಲಕ ಹೊಸ ಹೊಳಹುಗಳನ್ನು ನಾವು ಕಂಡುಕೊಳ್ಳುವ ನಿಟ್ಟಿನಲ್ಲಿ ವಿದ್ವತ್ ವಲಯದಲ್ಲಿ ಪ್ರಯತ್ನ ಸಾಗಿದೆ.

ನಮ್ಮ ವಿಶ್ವವಿದ್ಯಾಲಯದಲ್ಲಿ ಈ ನಿಟ್ಟಿನ ಪ್ರಯತ್ನವಾಗಿ ಭಾರತಶಾಸ್ತ್ರ ಕೇಂದ್ರ ಕಾರ್ಯಾರಂಭ ಮಾಡಿದ್ದು, ಶಾಸನ, ಹಸ್ತಪ್ರತಿ, ಭಾಷಾ ವಿಜ್ಞಾನ ಸೇರಿದಂತೆ ವೈವಿಧ್ಯಮಯ ನೆಲೆಯಲ್ಲಿ ವಿಷಯಗಳಲ್ಲಿ ಅಧ್ಯಯನ ಹಾಗೂ ಸಂಶೋಧನಾ ಚಟುವಟಿಕೆಗಳನ್ನು ಕೈಗೊಳ್ಳುವ ಉದ್ದೇಶವನ್ನು ಹೊಂದಿದೆ.

ಅಲ್ಲದೇ ಅಂತರ್ ಶಿಸ್ತೀಯ ಅಧ್ಯಯನಕ್ಕೆ ಪ್ರಾಧಾನ್ಯತೆ ದೊರೆಯುತ್ತಿರುವ ಪ್ರಸ್ತುತ ಕಾಲಘಟ್ಟದಲ್ಲಿ ಕಲೆ, ವಿಜ್ಞಾನ ಹಾಗೂ ಸಾಹಿತ್ಯದ ವಿದ್ವಾಂಸರ ಮೂಲಕ ವ್ಯಾಪಕ ಅಧ್ಯಯನಕ್ಕೆ ಪ್ರೋತ್ಸಾಹಿಸುವ ಉದ್ದೇಶವನ್ನು ವಿಶ್ವವಿದ್ಯಾಲಯವು ಹೊಂದಿದೆ.

ನಮ್ಮ ಈ ಸಂಚಿಕೆಯು ಸಂಯುಕ್ತ ಸಂಚಿಕೆಯಾಗಿದ್ದು ವೈವಿಧ್ಯಮಯ ವಿಮರ್ಶಾ ಲೇಖನಗಳು ಹಾಗೂ ಸೃಜನಶೀಲ ಬರಹಗಳಿಂದ ಕೂಡಿದೆ, ಸಹೃದಯಿ ಬಂಧುಗಳಾದ ತಾವು ಈ ಸಂಚಿಕೆಯನ್ನು ಓದಿ ಪ್ರತಿಕ್ರಿಯಿಸಬೇಕೆಂದು ನಾವು ಕೋರುತ್ತೇವೆ.

ತಮ್ಮ ಸಲಹೆ - ಸೂಚನೆಗಳಿಗೆ ಸದಾ ಸ್ವಾಗತ.

**ಡಾ. ವಿವೇಕಾನಂದ ಸಜ್ಜನ**